ಅಪರಿಚಿತ ಮತ್ತೊಮ್ಮೆ ಕೆಮ್ಮಿದ. ಎದ್ದು ಕಿಟಕಿಯ ಬಳಿಗೆ ಹೋದ. 'ನಿಮ್ಮ ದುಃಖದಲ್ಲಿ ನಾವೂ ಭಾಗಿಯಾಗಿದ್ದೇವೆ' ಎಂದು ತಿಳಿಸಲು ಕಂಪನಿ ನನ್ನನ್ನು ಕಳುಹಿಸಿದೆ. ನಾನೂ ಒಬ್ಬ ನೌಕರ. ಕಂಪನಿಯ ಪರವಾಗಿ ನಾನು ನಿಮ್ಮಲ್ಲಿಗೆ ಬಂದಿದ್ದೇನೆ.'

ವೈಟ್ ದಂಪತಿ ಏನೂ ಮಾತನಾಡಲಿಲ್ಲ. ಮಿಸ್ಟರ್ ವೈಟ್ ಮೂಕನಂತಾಗಿದ್ದ. ಮಿಸೆಸ್ ವೈಟ್‌ಳ ಕಣ್ಣಾಲಿಗಳು ತುಂಬಿ ಅವಳು ಕುರುಡಿಯಂತಾಗಿದ್ದಳು.

'ಈ ಅವಘಡದಲ್ಲಿ 'ಮಾವ್ ಮತ್ತು ಮೆಗ್ಗಿನ್ಸ್'ನ ಯಾವುದೇ ತಪ್ಪಿಲ್ಲ ಎಂದು ನಿಮಗೆ ತಿಳಿಸಲು ನನ್ನನ್ನು ಕಳುಹಿಸಿದ್ದಾರೆ. ಆದುದರಿಂದ ಕಂಪನಿಗೆ ಯಾವುದೇ ಪರಿಹಾರದ ಬಾಧ್ಯತೆಯಿರುವುದಿಲ್ಲ. ಆದರೂ, ಮನುಷ್ಯತ್ವದ ಆಧಾರದ ಮೇರೆಗೆ ನಮ್ಮ ಕಂಪನಿ, ನಿಮ್ಮ ಮಗ ಇಲ್ಲಿಯವರೆಗೆ ಮಾಡಿದ ಸೇವೆಯನ್ನು ಪರಿಗಣಿಸಿ, ಸಾಂಕೇತಿಕವಾಗಿ ಸ್ವಲ್ಪ ಹಣವನ್ನು ಕೊಡಲು ಇಚ್ಛಿಸಿದೆ.'

ಮಿಸ್ಟರ್ ವೈಟ್ ತಕ್ಷಣ ತನ್ನ ಹೆಂಡತಿಯ ಕೈಯನ್ನು ಕೊಡವಿ ಎದ್ದು ನಿಂತ. ಅವನ ಹಣೆಯ ಮೇಲೆ ಬೆವರ ಮಣಿಗಳು ಸಾಲುಗಟ್ಟಿ ನಿಂತಿದ್ದವು.

ಅವನು ಶುಷ್ಕ ದನಿಯಲ್ಲಿ ಕೇಳಿದ: 'ಎಷ್ಟು?'

'ಇನ್ನೂರು ಪೌಂಡುಗಳು!' ಅಪರಿಚಿತ ಹೇಳಿದ.

ಹೆಂಡತಿಯ ಚೀತ್ಕಾರ ಮಿಸ್ಟರ್ ವೈಟನಿಗೆ ಕೇಳಿಸಲೇ ಇಲ್ಲ. ಅವನು ಕುರುಡನಂತೆ ತಡವತೊಡಗಿದ. ಅವನ ತುಟಿಗಳ ಮೇಲೆ ಒಂದು ವಿಚಿತ್ರವಾದ ನಗು ಮೂಡಿ ಅವನು ಅಲ್ಲೇ ಕುಸಿದು ಬಿದ್ದ.

★★★

ಮನೆಯಿಂದ ಎರಡು ಮೈಲಿ ದೂರವಿರುವ ಹೊಸ ಸ್ಮಶಾನದಲ್ಲಿ ಮಗನನ್ನು ಮಣ್ಣು ಮಾಡಿ ವೈಟ್ ದಂಪತಿ ಭಾರವಾದ ಹೆಜ್ಜೆಗಳನ್ನಿಡುತ್ತಾ ಮನೆಗೆ ಬಂದರು. ಮನೆಯೊಳಗೆ ಮೌನ ರಾಚುತ್ತಿತ್ತು. ಇದೆಲ್ಲಾ ಎಷ್ಟು ಬೇಗ ಘಟಿಸಿ ಹೋಯಿತೆಂದರೆ ವೈಟ್ ದಂಪತಿಗೆ ಇದನ್ನು ಹೇಗೆ ನಿಭಾಯಿಸಬೇಕೆಂಬುದೇ ತೋಚಲಿಲ್ಲ.

ದಿನಗಳು ಸರಿದು ಹೋದವು. ಅವರಲ್ಲಿ ಒಂದು ರೀತಿಯ ಹತಾಶೆ ಮನೆಮಾಡಿಕೊಂಡಿತ್ತು. ಯಾಂತ್ರಿಕವಾಗಿ ಅವರು ಬದುಕು ಸಾಗಿಸುತ್ತಿದ್ದರು. ಬಹಳಷ್ಟು ಸಮಯ ಅವರಿಗೆ ಪರಸ್ಪರ ಮಾತನಾಡಬೇಕೆಂದೇ ಅನಿಸುತ್ತಿರಲಿಲ್ಲ. ಮಾತನಾಡಲು ವಿಷಯವೂ ಇರಲಿಲ್ಲ. ದಿನಗಳು ಹೀಗೇ ಸಂದುಹೋಗುತ್ತಿದ್ದವು.

ಒಂದು ರಾತ್ರಿ ಮಿಸ್ಟರ್ ವೈಟನಿಗೆ ಹಠಾತ್ತನೆ ಎಚ್ಚರವಾಯಿತು. ಅವನು ಪಕ್ಕದಲ್ಲಿ ತಡವಿ ನೋಡಿದ. ಮಂಚದ ಮೇಲೆ ತಾನೊಬ್ಬನೇ ಎನ್ನುವುದು ಅವನಿಗೆ ಅರಿವಾಯಿತು. ರೂಮಿನೊಳಗೆ ಗಾಢ ಕತ್ತಲು. ಅವನ ಕಿವಿಗಳು ಏನನ್ನೋ ಆಲಿಸುತ್ತಾ ನೆಟ್ಟಗಾದವು. ಕಿಟಕಿಯ ಬಳಿ ಬಿಕ್ಕಿ ಬಿಕ್ಕಿ ಅಳುವ ಸದ್ದು ಕೇಳಿಸಿತು. ಅವನು ಎದ್ದು ಕುಳಿತು ಕಿವಿಯಾನಿಸಿದ.

'ಹೊರಗೆ ತುಂಬಾ ಥಂಡಿ ಇದೆ ಡಿಯರ್. ಶೀತವಾದೀತು. ಬಂದು ಬಿಡು.' ಅವನು ಮೃದುವಾಗಿ ಹೆಂಡತಿಯನ್ನು ಕರೆದ.

'ಪಾಪ ಹರ್ಬರ್ಟನಿಗೆ ಅಲ್ಲಿ ಎಷ್ಟೊಂದು ಚಳಿಯಾಗುತ್ತಿರಬಹುದು?' ಅವಳು ಮತ್ತೊಮ್ಮೆ ಬಿಕ್ಕಳಿಸಿದಳು.

ಅವನು ಸುಮ್ಮನೇ ಕುಳಿತು ಮಡದಿ ರೋಧಿಸುತ್ತಿರುವುದನ್ನು ಅಸಹಾಯಕನಾಗಿ ಕೇಳತೊಡಗಿದ. ಕ್ರಮೇಣ ಅವನಿಗೆ ಮಂಪರು ಹತ್ತಿತು ಮತ್ತು ಅವನ ಕಣ್ಣುಗಳು